ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ನ್ಯಾಯಾಲಯ
ಬಾಗೇಪಲ್ಲಿ

ಉಪಸ್ಥಿತರು

ಶ್ರೀ. ಮಂಜುನಾಥ ಚಾರಿ ಡಿ.ಕೆ.,
ಬಿ.ಎ., ಎಲ್.ಎಲ್.ಬಿ.

ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ
ಬಾಗೇಪಲ್ಲಿ

ದಿನಾಂಕ 25 ನೇ ಮಾರ್ಚ್ 2026

ಅಸಲು ದಾವಾ ಸಂಖ್ಯೆ 57/2026

ವಾದಿ :: ಶ್ರೀ. ಹರಿನಾಥ ರೆಡ್ಡಿ

(ವಾದಿ ಪರ ವಕೀಲರು ಶ್ರೀ. ಎಂ.ಎಂ.)

ವಿರುದ್ಧ

ಪ್ರತಿವಾದಿ :: ಶ್ರೀ ಆದಿನಾರಾಯಣಪ್ಪ ಹಾಗೂ ಇತರರು

( ಪ್ರತಿವಾದಿಗಳ ಪರ ವಕೀಲರು ಶ್ರೀ ಎಸ್. ಕೆ. ಡಿ.)

ಮಧ್ಯಂತರ ಅರ್ಜಿ ದಿನಾಂಕ **29.01.2026.**

ಅರ್ಜಿದಾರರು :: ಶ್ರೀ. ಹರಿನಾಥ ರೆಡ್ಡಿ

ವಿರುದ್ಧ

ಪ್ರತಿವಾದಿ :: ಶ್ರೀ ಆದಿನಾರಾಯಣಪ್ಪ ಹಾಗೂ ಇತರರು

ವಾದಿಯು ದಿವಾನಿ ಪ್ರಕ್ರಿಯಾ ಸಂಹಿತೆ ಆದೇಶ **39** ನಿಯಮ **1** ಮತ್ತು **2** ಹಾಗೂ ಸಹವಾಚಕ ಕಲಂ **151** ರಲ್ಲಿ ಸಲ್ಲಿಸಿರುವ ಅರ್ಜಿಯ ಮೇಲಿನ ಆದೇಶ

1. ವಾದಿಯು ಅರ್ಜಿ ಮತ್ತು ವಾದಪತ್ರದಲ್ಲಿ ಹೇಳಿರುವುದೇನೆಂದರೆ, ವಾದಿಯು ದಾವ ಸ್ವತ್ತುಗಳನ್ನು ಅಬ್ದುಲ್ ಕುನ್ನಿ ಮತ್ತು ಇತರರಿಂದ ದಿನಾಂಕ 29.11.2023 ರಂದು ನೋಂದಾಯಿತ ಕ್ರಯ ಪತ್ರದ ಮೂಲಕ ಖರೀದಿಸಿರುವುದಾಗಿ ತಿಳಿಸಿರುತ್ತಾರೆ.

ಅಲ್ಲದೆ ಸದರಿ ದಾವಾ ಸ್ವತ್ತುಗಳನ್ನು ವಾದಿಯು ಖರೀದಿಸುವ ಪೂರ್ವ ಸದರಿ ಸ್ವತ್ತುಗಳ ಮಾಲೀಕರು ಸದರಿ ಸ್ವತ್ತುಗಳನ್ನು ಕೃಷಿಯೇತರ ಅಂದರೆ ವಸತಿ ಉದ್ದೇಶಕ್ಕಾಗಿ ಪರಿವರ್ತನೆ ಮಾಡಿಸಿರುತ್ತಾರೆ. ಮಾನ್ಯ ಜಿಲ್ಲಾಧಿಕಾರಿಗಳು ಸದರಿ ಪರಿವರ್ತನಾ ಆದೇಶ ಹೊರಡಿಸಿರುತ್ತಾರೆ. ಪ್ರಸ್ತುತ ವಾದಿಯು ದಾವಾ ಸ್ವತ್ತುಗಳಲ್ಲಿ ಹಕ್ಕು ಮತ್ತು ಶಾಂತಿಯುತ ಸ್ವಾಧೀನಾನುಭವ ಹೊಂದಿರುತ್ತಾರೆ. ಅಲ್ಲದೆ ವಾದಿಯು ನಿವೇಶನಗಳನ್ನು ರಚಿಸಲು ಚಿಕ್ಕಬಳ್ಳಾಪುರದ ನಗರ ಮತ್ತು ಗ್ರಾಮಾಂತರ ಯೋಜನಾ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಪ್ರಾಧಿಕಾರವು ತಾತ್ಕಾಲಿಕವಾಗಿ ಮಂಜೂರಾತಿ ಆದೇಶ ಮಾಡಿರುತ್ತದೆ. ಅಲ್ಲದೆ ವಾದಿಯು ನಿವೇಶನ ಅಭಿವೃದ್ಧಿ ಕೆಲಸಗಳನ್ನು ದಾವಾ ಸ್ವತ್ತಿನಲ್ಲಿ ಪ್ರಾರಂಭಿಸಿದ್ದು, ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ಯಾವುದೇ ಹಕ್ಕು ಹೊಂದಿಲ್ಲದೇ ಇದ್ದರೂ ಸಹ ವಾದಿಯ ದಾವಾ ಸ್ವತ್ತಿನಲ್ಲಿನ ಶಾಂತಿಯುತ ಸ್ವಾಧೀನಾನುಭವಕ್ಕೆ ಕಿರುಕುಳ ನೀಡಿರುತ್ತಾರೆ. ಅಲ್ಲದೆ ಇದೇ ಘನ ನ್ಯಾಯಾಲಯದಲ್ಲಿ ವಾದಿಯ ವಿರುದ್ಧ ಅಸಲು ದಾವಾ ಸಂಖ್ಯೆ 267/2025 ರಂತೆ ಪ್ರತಿಬಂಧಕಾಜ್ಞೆ ಕೋರಿ ದಾವೆ ಸಲ್ಲಿಸಿದ್ದಾರೆ. ಸದರಿ ದಾವೆಯಲ್ಲಿ ದಾವಾ ಸ್ವತ್ತಿನ ವಿವರವನ್ನು ಸರಿಯಾದ ರೀತಿಯಲ್ಲಿ ನಮೂದಿಸಿರುವುದಿಲ್ಲ. ಅಲ್ಲದೆ ಹಳೆಯ ಸರ್ವೇ ನಂಬರ್ 121, ಹೊಸ ಸರ್ವೇ ನಂಬರ್ 121 ರಿಂದ 121/8 ರ ವಿಸ್ತೀರ್ಣ 19 ½ ಎಕರೆ ಸಂಬಂಧ ಪ್ರತಿ ಹಿಸ್ಸೆಗೆ ಪ್ರತ್ಯೇಕ ಚಕ್ಕು ಬಂದಿಯನ್ನು ನೀಡಿರುವುದಿಲ್ಲ. ಆದುದರಿಂದಾಗಿ ವಾದಿಯು ಈ ಮಧ್ಯಂತರ ಅರ್ಜಿಯನ್ನು ಸಲ್ಲಿಸಿ ಪ್ರತಿವಾದಿಗಳಿಂದ ದಾವಾ ಸ್ವತ್ತಿನಲ್ಲಿನ ತನ್ನ ಸ್ವಾಧೀನಾನುಭವಕ್ಕೆ ಕಿರುಕುಳ ನೀಡಬಾರದೆಂದು ತಾತ್ಕಾಲಿಕ ಪ್ರತಿಬಂಧಕಾಜ್ಞೆ ಪ್ರಾರ್ಥಿಸಿರುತ್ತಾರೆ.

2. ಪ್ರತಿವಾದಿಗಳು ತಮ್ಮ ಪ್ರತಿವಾದ ಪತ್ರವನ್ನು ಮಧ್ಯಂತರ ಅರ್ಜಿಗೆ ತಕರಾರು ಎಂದು ಪರಿಗಣಿಸಲು ಕೋರಿರುತ್ತಾರೆ. ಸದರಿ ಪ್ರತಿವಾದ ಪತ್ರದಲ್ಲಿ ಹೇಳಿರುವುದೇನೆಂದರೆ, ದಾವಾ ಸ್ವತ್ತು ಮೂಲತಃ ಪ್ರತಿವಾದಿಗಳ ತಂದೆಯಾದ ಆದೆಪ್ಪ @ ಆದಿಮೂರ್ತಿ ರವರಿಗೆ ಸೇರಿರುತ್ತದೆ. ಸದರಿಯವರು ಎಲ್.ಎನ್.ಡಿ. ಆರ್ ಯು ಸಿ. ಬಿ.ಜಿ.ಪಿ. 114/1982-

1983, ದಿನಾಂಕ 20.09.1982 ರಂತೆ ಸದರಿ ಸ್ವತ್ತಿನ ಮಂಜೂರಾತಿ ಪಡೆದಿರುತ್ತಾರೆ. ಅಲ್ಲದೆ ಖಾತೆ ಮತ್ತು ಹಕ್ಕು ಬದಲಾವಣೆಯು ಸದರಿ ಆದೆಪ್ಪ ಹೆಸರಿನಲ್ಲಿ ಒಪ್ಪಿತವಾಗಿರುತ್ತದೆ. ಸದರಿ ಆದೆಪ್ಪ ಮೃತರಾದ ನಂತರ ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ಶಾಂತಿಯುತ ಸ್ವಾಧೀನಾನುಭವ ಹೊಂದಿರುತ್ತಾರೆ. ಅಲ್ಲದೆ ಪ್ರತಿವಾದಿಗಳ ತಂದೆಯು ಅನಕ್ಷರಸ್ಥರಾಗಿದ್ದು, ಕಂದಾಯ ದಾಖಲೆಗಳಲ್ಲಿ ಅನಧಿಕೃತ ಹೆಸರುಗಳನ್ನು ನಮೂದಿಸಿರುವುದನ್ನು ಗಮನಕ್ಕೆ ತೆಗೆದುಕೊಂಡಿರುವುದಿಲ್ಲ. ಅಲ್ಲದೆ ಪ್ರತಿವಾದಿಗಳು ಚಿಕ್ಕಬಳ್ಳಾಪುರದ ಮಾನ್ಯ ಉಪ - ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ನಿಯಮಿತ ಮೇಲ್ಮನವಿ ಸಂಖ್ಯೆ295/2024 ರಂತೆ ಮೇಲ್ಮನವಿ ಸಲ್ಲಿಸಿ, ವಾದಿಯ ಹೆಸರಿನಲ್ಲಿರುವ ಹಕ್ಕು ಬದಲಾವಣೆಯನ್ನು ರದ್ದುಗೊಳಿಸಲು ಪ್ರಾರ್ಥಿಸಿದ್ದು, ಸದರಿ ಮೇಲ್ಮನವಿ ವಜಾಗೊಂಡಿರುತ್ತದೆ. ತದನಂತರ ಪ್ರತಿವಾದಿಗಳು ಸದರಿ ಉಪ - ವಿಭಾಗಾಧಿಕಾರಿಗಳವರ ಆದೇಶವನ್ನು ಪ್ರಶ್ನಿಸಿ ಜಿಲ್ಲಾಧಿಕಾರಿಗಳ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯು ಅಧಿವಿಚಾರಣಾ ಹಂತದಲ್ಲಿರುತ್ತದೆ. ಅಲ್ಲದೆ ಪ್ರತಿವಾದಿಗಳು ವಾದಿಯ ವಿರುದ್ಧ ಇದೇ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 267/2025 ರಂತೆ ಪ್ರತಿಬಂಧಕಾಜ್ಞೆ ಕೋರಿ ದಾವೆ ಸಲ್ಲಿಸಿರುತ್ತಾರೆ. ಆದುದರಿಂದಾಗಿ ವಾದಿಯು ಸಲ್ಲಿಸಿರುವ ಈ ಅರ್ಜಿಯನ್ನು ಖರ್ಚು ಸಮೇತ ವಜಾಗೊಳಿಸಲು ಪ್ರಾರ್ಥಿಸಿದ್ದಾರೆ.

3. ವಾದಿ ಮತ್ತು ಪ್ರತಿವಾದಿ ಪರ ವಾದ - ವಿವಾದವನ್ನು ಆಲಿಸಲಾಯಿತು. ಕಡತದಲ್ಲಿರುವ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು.

4. ಈ ಮೇಲೆ ಚರ್ಚಿಸಿದ ಸಂಗತಿಗಳ ನಂತರ ನ್ಯಾಯಾಲಯದ ಗಮನಕ್ಕೆ ಉದ್ಭವಿಸುವ ಅಂಶಗಳೇನೆಂದರೆಃ

1) ವಾದಿಯು ಸಲ್ಲಿಸಿರುವ ದಾವೆಯು ಮೇಲು ನೋಟಕ್ಕೆ ದಾವಾ ವಿಚಾರಣಾ ಯೋಗ್ಯವಾಗಿದ್ದು, ಅಲ್ಲದೇ ದಾವೆಯು ಮೇಲುನೋಟಕ್ಕೆ ಡಿಕ್ರಿಗೆ

ಯೋಗ್ಯವಾಗಿದ್ದು ಎಂಬ ಅಂಶವನ್ನು ವಾದಿಯು ಸಾಭೀತುಪಡಿಸುತ್ತಾರೆಯೇ?

2) ವಾದಿಯು ದಾವೆಯ ಅನುಕೂಲಿತ ಸಮತೋಲನವು ತನ್ನ ಪರವಾಗಿದೆ ಎಂಬುದನ್ನು ರುಜುವಾತುಗೊಳಿಸುತ್ತಾರೆಯೇ?

3) ವಾದಿಯು ಸಲ್ಲಿಸಿರುವ ಅರ್ಜಿಯನ್ನು ಮಾನ್ಯಗೊಳಿಸದಿದ್ದರೆ ಅವರಿಗೆ ತುಂಬಲಾರದ ನಷ್ಟ ಉಂಟಾಗುತ್ತದೆ ಎಂಬುದನ್ನು ವಾದಿಯು ರುಜುವಾತುಪಡಿಸುತ್ತಾರೆಯೇ?

4) ಹಾಗಾದರೆ ಏನು ಆದೇಶ?

5. ಮೇಲಿನ ಅಂಶಗಳನ್ನು ನ್ಯಾಯಾಲಯವು ಈ ಕೆಳಕಂಡಂತೆ ಉತ್ತರಿಸಿದೆ.

| | | |
|---|---|---|
| ಅಂಶ 1 | : | ಸಕಾರಾತ್ಮಕವಾಗಿ |
| ಅಂಶ 2 | : | ಸಕಾರಾತ್ಮಕವಾಗಿ |
| ಅಂಶ 3: | : | ಸಕಾರಾತ್ಮಕವಾಗಿ |
| ಅಂಶ 4: | : | ಈ ಕೆಳಗೆ ಚರ್ಚಿಸಲಾದ ಕಾರಣಗಳಿಗಾಗಿ ಅಂತಿಮ ಆದೇಶದಂತೆ |

::ಕಾರಣಗಳು::

6. ಅಂಶ-1: ವಾದಿಯು ಈ ದಾವೆಯನ್ನು ಪ್ರತಿವಾದಿಯ ವಿರುದ್ಧ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಶಾಶ್ವತ ನಿರ್ಬಂಧಕಾಜ್ಞೆ ಆದೇಶ ಕೋರಿ ವಾದಪತ್ರವನ್ನು ಸಲ್ಲಿಸಿರುತ್ತಾರೆ. ಈಗಾಗಲೇ ಮೇಲಿನಂತೆ ವಾದಪತ್ರ ಹಾಗೂ ಲಿಖಿತ ಹೇಳಿಕೆಯಲ್ಲಿನ ಅಂಶಗಳನ್ನು ಚರ್ಚಿಸಲಾಗಿದ್ದು, ಪುನರ್ ಚರ್ಚೆ ಅನಾವಶ್ಯಕವಾಗಿದೆ.

7. ವಾದಿಯು ದಾವಾ ಸ್ವತ್ತುಗಳನ್ನು ದಿನಾಂಕ 29.11.2023 ರಂದು ಅಬ್ದುಲ್ ಕುನ್ನಿ ಮತ್ತು ಇತರರಿಂದ ನೋಂದಾಯಿತ ಕ್ರಯ ಪತ್ರದ ಮೂಲಕ ಅರ್ಜಿಸಿ ಮತ್ತು ಸದರಿ

ಕ್ರಯ ಪತ್ರಗಳ ಅನುಸಾರ ತನ್ನ ಹೆಸರಿಗೆ ಹಕ್ಕು ಬದಲಾವಣೆ ಹೊಂದಿರುವುದನ್ನು ಪ್ರತಿವಾದಿಗಳು ಅಲ್ಲಗಳೆದಿರುವುದಿಲ್ಲ. ಅಲ್ಲದೆ ವಾದಿಯು ದಿನಾಂಕ 29.11.2023ರ ನೋಂದಾಯಿತ ಕ್ರಯ ಪತ್ರಗಳ ನಕಲು ಪ್ರತಿಗಳನ್ನು ಹಾಗೂ ಮ್ಯೂಟೇಶನ್ ಪ್ರತಿಯನ್ನು ಹಾಜರುಪಡಿಸಿದ್ದು, ವಾದಿಯು ದಾವಾ ಸ್ವತ್ತುಗಳನ್ನು ದಿನಾಂಕ 29.11.2023ರಂದು ನೋಂದಾಯಿತ ಕ್ರಯ ಪತ್ರದ ಮೂಲಕ ಅರ್ಜಿಸಿ ಮತ್ತು ಸದರಿ ಸ್ವತ್ತುಗಳ ಸಂಬಂಧ ತನ್ನ ಹೆಸರಿಗೆ ಹಕ್ಕು ಬದಲಾವಣೆ ಹೊಂದಿರುವುದು ಕಂಡುಬರುತ್ತದೆ.

7.1 ಆದರೆ ಪ್ರತಿವಾದಿಗಳ ಪ್ರಮುಖ ನಿಲುವು ಏನೆಂದರೆ ವಾದಿಯ ಮಾರಾಟಗಾರರಾದ ಅಬ್ದುಲ್ ಕುನ್ನಿರವರು ಶ್ರೀಮತಿ. ರಾಮಲಕ್ಷ್ಮಮ್ಮರವರಿಂದ ದಾವಾ ಸ್ವತ್ತುಗಳನ್ನು ಖರೀದಿಸಿರುವುದಾಗಿ ತಿಳಿಸಿದ್ದು, ಅದರೆ ಸದರಿ ರಾಮಲಕ್ಷ್ಮಮ್ಮರವರು ಸದರಿ ದಾವಾ ಸ್ವತ್ತುಗಳಲ್ಲಿ ಯಾವುದೇ ಹಕ್ಕು, ಹಿತಾಸಕ್ತಿ ಮತ್ತು ಸ್ವಾಧೀನಾನುಭವ ಹೊಂದಿಲ್ಲವೆಂದು ತಿಳಿಸಿರುತ್ತಾರೆ. ಪ್ರಸ್ತುತ ದಾವೆಯು ಪ್ರತಿಬಂಧಕಾಜ್ಞೆ ಕೋರಿ ಸಲ್ಲಿಸಿದ ದಾವೆಯಾಗಿದ್ದು, ಸದರಿ ದಾವೆಯ ಇತ್ಯರ್ಥದಲ್ಲಿ ವಾದಿಯು ದಾವೆ ಸಲ್ಲಿಸುವ ಕಾಲಕ್ಕೆ ದಾವಾ ಸ್ವತ್ತಿನಲ್ಲಿ ಸ್ವಾಧೀನಾನುಭವ ಹೊಂದಿರುವರೇ ಎಂಬುವುದನ್ನು ನಿರ್ಧರಿಸಬೇಕಿದೆ. ಹಾಗಾಗಿ ರಾಮಲಕ್ಷ್ಮಮ್ಮರವರು ವಾದಿಯ ಮಾರಾಟಗಾರರಾದ ಅಬ್ದುಲ್ ಕುನ್ನಿರವರಿಗೆ ದಾವಾ ಸ್ವತ್ತುಗಳನ್ನು ಮಾರಾಟ ಮಾಡಲು ಹಕ್ಕು ಮತ್ತು ಅಧಿಕಾರ ಹೊಂದಿದ್ದರೇ ಎಂಬುವುದನ್ನು ಈ ಹಂತದಲ್ಲಿ ನಿರ್ಧರಿಸಲು ಸಾಧ್ಯವಿರುವುದಿಲ್ಲ. ಬಹು ಮುಖ್ಯವಾಗಿ ದಾವಾ ಸ್ವತ್ತುಗಳನ್ನು ವಾದಿಯು ಖರೀದಿಸುವ ಕಾಲಕ್ಕೆ ದಾವಾ ಸ್ವತ್ತುಗಳು ಕೃಷಿಯೇತರ ಬಳಕೆಗಾಗಿ ಪರಿವರ್ತನೆಯಾಗಿದ್ದವು ಎಂಬುವುದನ್ನು ಪ್ರತಿವಾದಿಗಳು ನಿರ್ಧಿಷ್ಟವಾಗಿ ಅಲ್ಲಗಳೆದಿರುವುದಿಲ್ಲ. ಅಲ್ಲದೆ ವಾದಿಯು ಸದರಿ ದಾವಾ ಸ್ವತ್ತುಗಳಲ್ಲಿ ನಿವೇಶನಗಳನ್ನು ಅಭಿವೃದ್ಧಿ ಪಡಿಸಲು ಹೊರಟಿರುವುದನ್ನು ಪ್ರತಿವಾದಿಗಳು ಅಲ್ಲಗಳೆದಿರುವುದಿಲ್ಲ. ಹಾಗಾಗಿ ದಾವಾ ಸ್ವತ್ತುಗಳಲ್ಲಿ ವಾದಿಯು ಸ್ವಾಧೀನಾನುಭವ ಹೊಂದಿರುವುದನ್ನು ತಳ್ಳಿಹಾಕಲು ಸಾಧ್ಯವಿರವುದಿಲ್ಲ.

7.2. ದಾವಾ ಸ್ವತ್ತು ಮೂಲತಃ ಪ್ರತಿವಾದಿಗಳ ತಂದೆಯಾದ ಆದೆಪ್ಪ @ ಆದಿಮೂರ್ತಿರವರಿಗೆ ಮಂಜೂರಾಗಿರುವ ಸ್ವತ್ತು ಎಂದು ಪ್ರತಿವಾದಿಗಳು ತಿಳಿಸಿಕೊಂಡಿರುತ್ತಾರೆ. ಅಲ್ಲದೆ ದಾವಾ ಸ್ವತ್ತಿನ ಖಾತೆಯು ಸದರಿ ಆದೆಪ್ಪರವರ ಹೆಸರಿಗೆ ಹಕ್ಕು ಬದಲಾವಣೆ ಆಗಿತ್ತು ಎಂದು ಪ್ರತಿವಾದ ಪತ್ರದಲ್ಲಿ ತಿಳಿಸಿಕೊಂಡಿರುತ್ತಾರೆ. ಆದರೆ ಪ್ರತಿವಾದಿಗಳು ಆ ರೀತಿ ಆದೆಪ್ಪರವರ ಹೆಸರಿಗೆ ದಾವಾ ಸ್ವತ್ತುಗಳು ಖಾತೆ ಬದಲಾವಣೆ ಹೊಂದಿರುವ ಬಗ್ಗೆ ಯಾವುದೇ ಮ್ಯೂಟೇಶನ್ ಪ್ರತಿಯನ್ನು ಹಾಜರುಪಡಿಸಿರುವುದಿಲ್ಲ. ಅಲ್ಲದೆ ಪ್ರತಿವಾದಿಗಳು ಒಂದು ಗ್ರಾಂಟ್ ಸರ್ಟಿಫಿಕೇಟ್‌ನ ನಕಲು ಪ್ರತಿಯನ್ನು ಹಾಜರುಪಡಿಸಿದ್ದು, ಸದರಿ ಪ್ರತಿಯಲ್ಲಿ ಆದೆಪ್ಪ @ ಆದಿಮೂರ್ತಿರವರಿಗೆ ಸರ್ವೇ ನಂಬರ್ 21ರ ಪೈಕಿ ಜಮೀನು ಮಂಜೂರಾಗಿರುವ ಬಗ್ಗೆ ನಮೂದಾಗಿದ್ದರೂ ಸಹ, ಸದರಿ ಸರ್ವೇ ನಂಬರ್ 21ರಲ್ಲಿ ಯಾವ ಭಾಗದಲ್ಲಿ ಸ್ವತ್ತು ಮಂಜೂರಾಗಿತ್ತು ಮತ್ತು ಮಂಜೂರಾಗುವ ಕಾಲಕ್ಕೆ ಕಚ್ಚಾ ನಕ್ಷೆ ಮತ್ತು ಸರ್ವೇ ನಡೆಸಿದ ಬಗ್ಗೆ ಯಾವುದೇ ದಾಖಲೆಗಳನ್ನು ಪ್ರತಿವಾದಿಗಳು ಹಾಜರುಪಡಿಸಿರುವುದಿಲ್ಲ. ಆದುದರಿಂದಾಗಿ ಸರ್ವೇ ನಂಬರ್ 21ರ ಪೂರ್ಣ ಸ್ವತ್ತಿನಲ್ಲಿ ಪ್ರತಿವಾದಿಗಳ ತಂದೆಯು ಯಾವ ನಿರ್ಧಿಷ್ಟ ಭಾಗದಲ್ಲಿ ಮಂಜೂರಾತಿ ಪಡೆದು ಮತ್ತು ಸ್ವಾಧೀನ ಹೊಂದಿದ್ದರು ಎಂಬುವುದಕ್ಕೆ ಯಾವುದೇ ಸರ್ವೇ ದಾಖಲೆಗಳನ್ನು ಪ್ರತಿವಾದಿಗಳು ಹಾಜರುಪಡಿಸಿರುವುದಿಲ್ಲ. ಆದುದರಿಂದಾಗಿ ವಾದಿಗಳು ಖರೀದಿಸಿರುವ ದಾವಾ ಸ್ವತ್ತುಗಳನ್ನೆ ಆದೆಪ್ಪರವರಿಗೆ ಸರ್ಕಾರವು ಮಂಜೂರಾತಿ ಮಾಡಿತ್ತು ಎಂದು ಈ ಹಂತದಲ್ಲಿ ನಿರ್ಧರಿಸಲು ಸಾಧ್ಯವಿರವುದಿಲ್ಲ.

8. ದಾವೆಯ ಮೇಲು ನೋಟ ಎಂದರೆ ವಾದಿಯು ದಾವಾ ಸ್ವತ್ತಿನ ಸಂಬಂಧ ತನ್ನ ಹಕ್ಕನ್ನು ಈ ಹಂತದಲ್ಲಿ ರುಜುವಾತುಪಡಿಸಿದ್ದಾರೆ ಎನ್ನುವುದಾಗಿರುವುದಿಲ್ಲ. ಬದಲಾಗಿ ದಾವೆಯ ಸಂಗತಿಗಳು ಈ ಹಂತದಲ್ಲಿ ಮೇಲು ನೋಟಕ್ಕೆ ವಾದಿಯ ಪರವಾಗಿರುವುದು ಹಾಗೂ ದಾವೆಯ ಸಂಗತಿಗಳು ಅಧಿವಿಚಾರಣೆ ಹೊಂದಲು ಅರ್ಹವಾಗಿರುವುದು. ಹಾಗಾಗಿ, ವಾದಿಯು ತಾನು ದಾವಾ ಸ್ವತ್ತಿಗೆ ಕ್ರಯಪತ್ರದ ಅನುಸಾರ ಸ್ವಾಧೀನಾನುಭವ

ಹೊಂದಿರುವುದಾಗಿ ತಿಳಿಸಿದ್ದು, ಹಾಗಾಗಿ, ಸದರಿ ಸಂಗತಿಯು ವಿಚಾರಣಾ ಯೊಗ್ಯವಾಗಿದೆ. ಅಲ್ಲದೆ ಪ್ರತಿವಾದ ಪತ್ರದ ಖಂಡಿಕೆ - 25 ರಲ್ಲಿ ಈ ಕೆಳಕಂಡಂತೆ ಪ್ರತಿವಾದಿಗಳು ತಿಳಿಸಿರುತ್ತಾರೆ.

> **25. The defendants submit that, till today the plaintiff and their family members continued the peaceful possession and enjoyment of the aforesaid property without any disturbance from anybody.**

ಸದರಿ ಪ್ರತಿವಾದ ಪತ್ರದ ಮೇಲಿನ ಸಂಗತಿಗಳನ್ನು ಪರಿಶೀಲಿಸಿದಾಗ, ವಾದಿಯು ದಾವಾ ಸ್ವತ್ತುಗಳಲ್ಲಿ ಸ್ವಾಧೀನಾನುಭವ ಹೊಂದಿರುವುದು ದೃಢವಾಗುತ್ತದೆ. ಹಾಗಾಗಿ ದಾವಾ ಸ್ವತ್ತುಗಳಲ್ಲಿ ವಾದಿಯು ಸ್ವಾಧೀನಾನುಭವ ಹೊಂದಿರುವುದು ಈ ಹಂತದಲ್ಲಿ ದೃಢವಾಗಿದ್ದು, ಆದುದರಿಂದಾಗಿ ಅಂಶ -1 ನ್ನು ನ್ಯಾಯಾಲಯವು ಸಕಾರಾತ್ಮಕವಾಗಿ ಉತ್ತರಿಸಿದೆ.

10. ಅಂಶ 2 ಮತ್ತು 3: ಈಗಾಗಲೇ ಅಂಶ-1 ರಲ್ಲಿ ಚರ್ಚಿಸಿದಂತೆ ದಾವಾ ಸ್ವತ್ತುಗಳಲ್ಲಿ ವಾದಿಗಳು ಸ್ವಾಧೀನದಲ್ಲಿರುವುದು ಮೇಲುನೋಟಕ್ಕೆ ಕಂಡು ಬರುತ್ತದೆ. ಹಾಗಾಗಿ ಈ ಮಧ್ಯಂತರ ಅರ್ಜಿಯನ್ನು ಮಾನ್ಯ ಮಾಡದೇ ಹೋದರೆ ಪ್ರತಿವಾದಿಗಳು ವಾದಿಯನ್ನು ದಾವಾ ಸ್ವತ್ತಿನಿಂದ ಒಕ್ಕಲೆಬ್ಬಿಸುವ ಅಪಾಯವಿರುತ್ತದೆ. ಇದರಿಂದಾಗಿ ಅತಿ ಹೆಚ್ಚಿನ ಹಾಗೂ ಅಸಾಧ್ಯವಾದ ನಷ್ಟವು ವಾದಿಗಳಿಗೆ ಉಂಟಾಗುತ್ತದೆ. ಅಲ್ಲದೇ ವಾದಿಗಳು ಮತ್ತು ಪ್ರತಿವಾದಿಗಳು ಸಲ್ಲಿಸಿರುವ ದಾಖಲೆ ಮತ್ತು ಸಂಗತಿಗಳನ್ನು ಒಟ್ಟಾರೆ ಪರಿಗಣಿಸಿದಾಗ, ಅನುಕೂಲತೆಯ ಸಮತೋಲನವು ವಾದಿಗಳ ಕಡೆ ವಾಲುತ್ತದೆ. ಹಾಗಾಗಿ ಅಂಶ-2 ಮತ್ತು 3 ರನ್ನು ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

11. ಅಂಶ 4 : ಅಂಶ 1 ರಿಂದ 3 ರಲ್ಲಿ ಚರ್ಚಿಸಲಾದ ಕಾರಣಗಳಿಗಾಗಿ ನ್ಯಾಯಾಲಯವು ಈ ಕೆಳಕಂಡೆಂತೆ ಮಾಡುವ ಆದೇಶ,

**::ಆದೇಶ ::**

ವಾದಿಯು ದಿನಾಂಕ 29.01.2026 ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಸಹವಾಚಕ ಕಲಂ 151 ರಂತೆ ಸಲ್ಲಿಸಿರುವ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಲಾಗಿದೆ.

ಪ್ರತಿವಾದಿಯಾಗಲೀ, ಅವರ ಅನುಚರರು ಯಾರೇ ಆಗಲೀ ವಾದಿಯನ್ನು ದಾವಾ ಸ್ವತ್ತಿನಿಂದ ಒಕ್ಕಲೆಬ್ಬಿಸದಂತೆ ಹಾಗೂ ದಾವಾ ಸ್ವತ್ತಿನಲ್ಲಿನ ವಾದಿಯ ಶಾಂತಿಯುತ ಸ್ವಾಧೀನಾನುಭವಕ್ಕೆ ಕಿರುಕುಳ ನೀಡಬಾರದೆಂದು ದಾವೆಯ ಅಂತಿಮ ಅಧಿವಿಚಾರಣಾ ಹಂತದವರೆಗೂ ತಾತ್ಕಾಲಿಕ ನಿರ್ಬಂಧಕಾಜ್ಞೆ ಹೊರಡಿಸಲಾಗಿದೆ.

(ಈ ಆದೇಶವನ್ನು ಬೆರಳಚ್ಚುಗಾರರಿಗೆ ಗಣಕಯಂತ್ರದ ಮೂಲಕ ನೇರವಾಗಿ ಉಕ್ತಲೇಖನ ಕೊಟ್ಟು ಬೆರಳಚ್ಚು ಮಾಡಿದ ನಂತರ ನಾನು ಅದನ್ನು ಓದಿ, ತಪ್ಪುಗಳನ್ನು ತಿದ್ದಿ, ನಂತರ ಈ ದಿನ ಅಂದರೆ ದಿನಾಂಕ 25.03.2026. ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿರುತ್ತೇನೆ)

(ಡಿ ಕೆ ಮಂಜುನಾಥ ಚಾರಿ)
ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ
ಬಾಗೇಪಲ್ಲಿ

(Pronounced in open court vide separate order)

<u>ಆದೇಶ</u>

ವಾದಿಯು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಸಹವಾಚಕ ಕಲಂ 151 ರಂತೆ ಸಲ್ಲಿಸಿರುವ ಮಧ್ಯಂತರ ಅರ್ಜಿಯನ್ನು ಮಾನ್ಯ ಮಾಡಲಾಗಿದೆ.

ಪ್ರತಿವಾದಿ, ಅವರ ಪ್ರತಿನಿಧಿಗಳು, ಅವನ ಪರ ಇತರೆ ಯಾವುದೇ ವ್ಯಕ್ತಿಯು ವಾದಿಯು ದಾವಾ ಸ್ವತ್ತಿನಲ್ಲಿ ರಸ್ತೆಯನ್ನು ನಿರ್ಮಿಸದಂತೆ ದಾವೆಯ ಅಧಿ ವಿಚಾರಣೆ

ಮುಗಿಯುವವರೆಗೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಪ್ರತಿವಾದಿಯ ವಿರುದ್ಧ ಹೊರಡಿಸಿದೆ.

No order as to cost. Issues framed. Call on for plaintiff evidence by 01.10.2022.

*(Dictated to the Stenographer directly on computer, computerized by her, corrected, revised and then pronounced in the open Court on this the 13th day of September, 2022)*

**(MANJUNATHA CHARI. D.K.)**
**Addl. Civil Judge and JMFC.,**
***Gowribidanur.***